Phone No: (0836) 2215352, 2771368

# ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

# KARNATAK UNIVERSITY, DHARWAD

*NAAC Accredited with "A" Grade 2022*

*"UNIVERSITY WITH POTENTIAL FOR EXCELLENCE:*

**ಹಣಕಾಸು ವಿಭಾಗ**

**FINANCE DEPARTMENT**

ಪಾವಟೇನಗರ, ಧಾರವಾಡ–580 003
ಕರ್ನಾಟಕ–ಭಾರತ
Pavate Nagar, Dharwad-580 003
Karnataka-India

ನಂ. ಕವಿವಿ/ಹವಿ/ಆಯವ್ಯಯ–ವಾಲೆಪ/2024–25 ದಿನಾಂಕ :04–02–2025

## ಆಯವ್ಯಯ ಸುತ್ತೋಲೆ

ವಿಷಯ :2025–2026 ನೇ ಸಾಲಿನ ಆಯವ್ಯಯ ಅಂದಾಜುಗಳ ತಯಾರಿಕೆ ಕುರಿತು.
ಉಲ್ಲೇಖ: ಮಾನ್ಯ ಕುಲಪತಿಗಳ ಆದೇಶ ದಿನಾಂಕ:04–02–2025

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಕಲಂ 48 ರ ಅನ್ವಯ ಕರ್ನಾಟಕ ವಿಶ್ವವಿದ್ಯಾಲಯವು ಸನ್ 2025–2026 ನೇ ಸಾಲಿನ ಕರಡು ಆಯವ್ಯಯ ಅಂದಾಜುಗಳನ್ನು ನಿಗದಿತ ವೇಳೆಯಲ್ಲಿ ತಯಾರಿಸಿ ಸಕ್ಷಮ ಪ್ರಾಧಿಕಾರಿಗಳ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ. ಆಯವ್ಯಯ ಅಂದಾಜುಗಳನ್ನು ತಯಾರಿಸುವ ಕಾರ್ಯವನ್ನು ನಿಗದಿತ ಕಾಲಮಿತಿಯಲ್ಲಿ ಸಿದ್ದಪಡಿಸಬೇಕಾಗುತ್ತದೆ. ವಿಶ್ವವಿದ್ಯಾಲಯವು ರಾಜ್ಯ ಸರ್ಕಾರ ಬಿಡುಗಡೆ ಮಾಡುವ ಬ್ಲಾಕ ಅನುದಾನದ ಮೇಲೆ ಸಂಪೂರ್ಣ ಅವಲಂಬಿಸಿದೆ. ಈ ಬ್ಲಾಕ ಅನುದಾನವು ವಿಶ್ವವಿದ್ಯಾಲಯದ ನೌಕರರ ಸಂಬಳ ಹಾಗೂ ಪಿಂಚಣಿಗಳಿಗೆ ಮಾತ್ರ ಬಿಡುಗಡೆಯಾಗುತ್ತಿದ್ದು, ಆದರೆ ಕೆಲ ವರ್ಷಗಳಿಂದ ರಾಜ್ಯ ಸರಕಾರವು ಪಿಂಚಣಿಗಾಗಿ ಸಲ್ಲಿಸಿದ ಬೇಡಿಕೆ ಅನುಸಾರ ಶೇ 50% ರಿಂದ 60% ಅನುದಾನ ಬಿಡುಗಡೆ ಮಾಡುತ್ತಿದ್ದು ಉಳಿದ ಮೊತ್ತವನ್ನು ಆಂತರಿಕ ಸಂಪನ್ಮೂಲಗಳಿಂದ ಭರಿಸಿಕೊಳ್ಳಲು ತಿಳಿಸಿರುತ್ತದೆ. ಅದೇ ರೀತಿ ವಿಶ್ವವಿದ್ಯಾಲಯದಲ್ಲಿ ಪ್ರತಿ ವರ್ಷ ಸಿಬ್ಬಂದಿಗಳು ನಿವೃತ್ತಿಯಾಗುತ್ತಿದ್ದ ಪ್ರಯುಕ್ತ ತುಂಬಾ ಖಾಲಿ ಹುದ್ದೆಗಳು ಇರುತ್ತವೆ. ಸದರ ಖಾಲಿ ಹುದ್ದೆಗಳ ಎದುರಾಗಿ ತಾತ್ಕಾಲಿಕವಾಗಿ ಮತ್ತು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡ ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿಗಳ ವೇತನವನ್ನು ಸಹ ಆಂತರಿಕ ಸಂಪನ್ಮೂಲಗಳಿಂದ ಭರಿಸಲಾಗುತ್ತಿದೆ ಇದರಿಂದ ವಿಶ್ವವಿದ್ಯಾಲಯಕ್ಕೆ ಆರ್ಥಿಕವಾಗಿ ತುಂಬಾ ಹೊರೆಯಾಗುತ್ತಿದೆ. ಮುಂದುವರೆದು, ವೇತನೇತರ ವೆಚ್ಚಗಳನ್ನು ವಿಶ್ವವಿದ್ಯಾಲಯವು ತನ್ನ ಆಂತರಿಕ ಸಂಪನ್ಮೂಲಗಳಲ್ಲಿ ಭರಿಸಬೇಕಾಗುತ್ತದೆ. ದಿನೇ ದಿನೇ ಹೆಚ್ಚುತ್ತಿರುವ ಆಡಳಿತ ವೆಚ್ಚಗಳು ಹಾಗೂ ಸೀಮಿತ ಆಂತರಿಕ ಸಂಪನ್ಮೂಲಗಳನ್ನು ಗಮನದಲ್ಲಿರಿಸಿಕೊಂಡು ವಿಶ್ವವಿದ್ಯಾಲಯದ 2025–2026 ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಸಿದ್ದಪಡಿಸಬೇಕಾಗುತ್ತದೆ.

ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಮುಖ್ಯಸ್ಥರು ತಮ್ಮ ಘಟಕಗಳಿಗೆ ಅವಶ್ಯವಿರುವ ಅನುದಾನದ ಮಿತಿಗಳನ್ನು ಗಮನದಲ್ಲಿರಿಸಿಕೊಂಡು ಆದ್ಯತೆ ಮತ್ತು ತೀರಾ ಅತ್ಯಗತ್ಯವೆನಿಸಿದ ಕೆಲಸ ಕಾರ್ಯಗಳನ್ನು ಅಳವಡಿಸಿಕೊಂಡು ಅನುದಾನದ ಅಗತ್ಯತೆಯ ಪ್ರಸ್ತಾವನೆಗಳನ್ನು ತಮ್ಮ ವಿಭಾಗ/ಘಟಕಕ್ಕೆ ಹಂಚಿಕೆ ಮಾಡಲಾದ ಆಯವ್ಯಯ ಲೆಕ್ಕ ಶೀರ್ಷಿಕೆ ಅನುಸಾರ ಈ ಪತ್ರದೊಂದಿಗೆ ಲಗತ್ತಿಸಿರುವ (Annual Plan of Works /Procurments for the year and proposals for the year 2025–2026) **ನಮೂನೆ–1 ರಲ್ಲಿ (Format-1)** ಮತ್ತು **ನಮೂನೆ–1(A) (Format-1(A)** ರಲ್ಲಿ ಹಾಗೂ ವಿಭಾಗದ/ಮಹಾವಿದ್ಯಾಲಯದ ಮಾಹಿತಿ ನಮೂನೆ 3 (Department/College information **Format-3**)ರಲ್ಲಿ ಸಿದ್ಧಪಡಿಸಿ ಈ ಕಛೇರಿಗೆ ದಿನಾಂಕ 15–02–2025 ರ ಒಳಗಾಗಿ ತಪ್ಪದೇ ಸಲ್ಲಿಸುವುದು. ಪ್ರಸ್ತಾವನೆ ಸಲ್ಲಿಸುವಾಗ ಈ ಕೆಳಗಿನ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಪ್ರಸ್ತಾವನೆ ಸಲ್ಲಿಸುವುದು.

**ಸೂಚನೆಗಳು :**

1. ಕಳೆದ ಸಾಲಿನ ಆಯವ್ಯಯದಲ್ಲಿ ಹಂಚಿಕೆ ಮಾಡಿದ್ದ ಅನುದಾನದ ಮಿತಿಯನ್ನು ಗಮನದಲ್ಲಿರಿಸಿಕೊಂಡು ಪ್ರಸ್ತಾವನೆ ಸಲ್ಲಿಸುವುದು ಹಾಗೂ ಅತ್ಯಂತ ಅಗತ್ಯವಿರುವ ಪ್ರಸ್ತಾವನೆಗಳನ್ನು ಸೂಕ್ತ ಸ್ಪಷ್ಟೀಕರಣದೊಂದಿಗೆ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳುವುದು.
2. **ಕಟ್ಟಡ ವಿಭಾಗದವರು ವಿಶ್ವವಿದ್ಯಾಲಯದ ಆವರಣ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಆವರಣಗಳ ಕಟ್ಟಡಗಳ ನವೀಕರಣ/ಉನ್ನತೀಕರಣ/ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ವಿವರವಾದ ಪ್ರಸ್ತಾವನೆಯನ್ನು ಸ್ಪಷ್ಟೀಕರಣದೊಂದಿಗೆ ಸಲ್ಲಿಸುವುದು.**
3. **ಉಪಕುಲಸಚಿವರು ವಿದ್ಯಾಮಂಡಳ ವಿಭಾಗ ಮತ್ತು ಉಪಕುಲಸಚಿವರು ಸಾಮಾನ್ಯ ಆಡಳಿತ ವಿಭಾಗ ಇವರುಗಳು 2025–2026 ನೇ ಸಾಲಿಗೆ ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿರುವ ಬೋಧನಾ ಸಹಾಯಕರು/ಅತಿಥಿ ಉಪನ್ಯಾಸಕರು ಮತ್ತು ಹೊರಗುತ್ತಿಗೆ, ಸಂಚಿತ, ದಿನಗೂಲಿ ಸಿಬ್ಬಂದಿಗಳಿಗೆ ನೀಡಬೇಕಾದ ವೇತನದ/ಸಂಭಾವನೆಯ ಮೊತ್ತದ ಅಂದಾಜುಗಳನ್ನು ಸೂಕ್ತ ವಿವರಣೆಯೊಂದಿಗೆ ಪ್ರಸ್ತಾವನೆ ಸಲ್ಲಿಸುವುದು.**
4. ಆಯವ್ಯಯ ಪ್ರಸ್ತಾವನೆಗಳಲ್ಲಿ ಆರ್ಥಿಕ ಮಿತವ್ಯಯ ಪಾಲಿಸುವುದು ಹಾಗೂ ಅಗತ್ಯವಾದ ವೆಚ್ಚಗಳನ್ನು ಮಾತ್ರ ಪರಿಗಣಿಸಿ ಪ್ರಸ್ತಾವನೆ ಸಲ್ಲಿಸುವುದು.
5. ನಮೂನೆ 3ನ್ನು ಎಲ್ಲ ಸ್ನಾತಕೋತ್ತರ ವಿಭಾಗದವರು ಮತ್ತು ಸಂಲಗ್ನ ಮಹಾವಿದ್ಯಾಲಯದವರು ತಮ್ಮ ವಿಭಾಗ ಮತ್ತು ಮಹಾವಿದ್ಯಾಲಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು.

ಈ ಮೇಲೆ ಹೇಳಿದ ಪ್ರಸ್ತಾವನೆಯಲ್ಲಿ ಹೊಸದಾಗಿ ಲೆಕ್ಕಶೀರ್ಷಿಕೆ ಸೇರಿಸಬೇಕಾದರೆ, ಅಂತಹ ಕೆಲಸ ಕಾರ್ಯಗಳ/ಖರೀದಿಗಳ ವಿವರಗಳನ್ನು "ಹೊಸ ಪ್ರಸ್ತಾವನೆ" ಹೆಸರಿನಲ್ಲಿ (New Proposals for the year 2025-2026) **ನಮೂನೆ-2 (Format-2)**ರಲ್ಲಿ ಪ್ರತ್ಯೇಕವಾಗಿ ಸೂಕ್ತ ಸ್ಪಷ್ಟೀಕರಣದೊಂದಿಗೆ ಪ್ರಸ್ತಾವನೆ ತಯಾರಿಸಿ ಮಾನ್ಯ ಕುಲಪತಿಗಳ ಒಪ್ಪಿಗೆ ಪಡೆದು ಹಣಕಾಸು ವಿಭಾಗಕ್ಕೆ ಸಲ್ಲಿಸಬೇಕೆಂದು ಸೂಚಿಸಿದೆ. ಸದರ ಪ್ರಸ್ತಾವನೆಯನ್ನು ಹಣಕಾಸು ಅಧಿಕಾರಿಗಳು ಪರಿಶೀಲಿಸಿ ಅಂತಿಮಗೊಳಿಸುವರು.

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಎಲ್ಲ ವಿಭಾಗದ ಮುಖ್ಯಸ್ಥರು ವಿಶ್ವವಿದ್ಯಾಲಯದ ವಾಸ್ತವಿಕ ಆಯವ್ಯಯ ಅಂದಾಜುಗಳನ್ನು ತಯಾರಿಸುವಲ್ಲಿ ಸಹಕರಿಸಲು ಕೋರಲಾಗಿದೆ. ವಿವಿಧ ವಿಭಾಗಗಳ ಮುಖ್ಯಸ್ಥರು ತಮ್ಮ ವಿಭಾಗಕ್ಕೆ 2025-2026 ನೇ ಸಾಲಿಗೆ ಸಂಬಂಧಿಸಿದ ಆಯವ್ಯಯ ಪ್ರಸ್ತಾವನೆಗಳನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದ ನಮೂನೆಗಳಲ್ಲಿ ಭರ್ತಿಮಾಡಿ ಹಣಕಾಸು ಅಧಿಕಾರಿಗಳಿಗೆ **ದಿನಾಂಕ:15-02-2025ರ** ಒಳಗಾಗಿ ತಪ್ಪದೆ ಕಳುಹಿಸಲು ಕೊರಲಾಗಿದೆ. ಮತ್ತು ಅದರ ವಿವರಗಳನ್ನು budget@kud.ac.in ಈ ಮಿಂಚಂಚೆಗೆ (E-Mail) ತಮ್ಮ ವಿಭಾಗದ ಅಧಿಕೃತ ಮಿಂಚಂಚೆ(E-Mail) ಮೂಲಕ ಕಳುಹಿಸುವುದು.

ಮುಂದುವರೆದು, ಎಲ್ಲ ವಿಭಾಗಗಳ ಮುಖ್ಯಸ್ಥರು ತಪ್ಪದೆ ಆಯವ್ಯಯ ಅಂದಾಜುಗಳ ಬೇಡಿಕೆಗಳನ್ನು ನಿಗದಿತ ನಮೂನೆಗಳಲ್ಲಿ ಮತ್ತು ನಿಗದಿತ ಸಮಯದಲ್ಲಿ ಸಲ್ಲಿಸದೇ ಇದ್ದಲ್ಲಿ ಅಂತಹ ವಿಭಾಗಕ್ಕೆ ಆಯವ್ಯಯ ಅಂದಾಜುಗಳನ್ನು ಪರಿಗಣಿಸಲಾಗುವುದಿಲ್ಲ.

ಹಣಕಾಸು ಅಧಿಕಾರಿಗಳು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ವಿಶೇಷ ಸೂಚನೆ:**

***ಆಯವ್ಯಯ ಪ್ರಸ್ತಾವನೆ ಸುತ್ತೋಲೆಯನ್ನು ಮತ್ತು ಅದಕ್ಕೆ ಸಂಬಂಧಿಸಿದ ನಮೂನೆಗಳನ್ನು ವಿಶ್ವವಿದ್ಯಾಲಯದ ಅಂತರ್ಜಾಲ kud.ac.in ರ ಪ್ರಕಟಣೆಯಲ್ಲಿ ಪಡೆಯಬಹುದು. ಅದರಂತೆ ಅದರ ನಮೂನೆಗಳನ್ನು MS-Excel ರಲ್ಲಿ ಭರ್ತಿಮಾಡಿ budget@kud.ac.in ಈ ಮಿಂಚಂಚೆ (E-Mail) ಮೂಲಕ ನಿಗದಿತ ಸಮಯದಲ್ಲಿ ಸಲ್ಲಿಸಲು ತಿಳಿಸಲಾಗಿದೆ.***

<u>ಪ್ರತಿಗಳನ್ನು ಸಾದರಪೂರ್ವಕವಾಗಿ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ</u>

- ಕುಲಪತಿಗಳ ಆಪ್ತ ಕಾರ್ಯಾಲಯ, ಕವಿವಿ ಧಾರವಾಡ
- ಕುಲಸಚಿವರ ಆಪ್ತ ಕಾರ್ಯಾಲಯ, ಕವಿವಿ ಧಾರವಾಡ
- ಕುಲಸಚಿವರ(ಮೌಲ್ಯಮಾಪನ) ಆಪ್ತ ಕಾರ್ಯಾಲಯ, ಕವಿವಿ ಧಾರವಾಡ
- ಹಣಕಾಸು ಅಧಿಕಾರಿಗಳ ಆಪ್ತ ಕಾರ್ಯಾಲಯ, ಕವಿವಿ ಧಾರವಾಡ
- ಸ್ಥಾನಿಕ ಅಭಿಯಂತರರು ಕಟ್ಟಡ ವಿಭಾಗ ಕವಿವಿ ಧಾರವಾಡ
- ಕವಿವಿ ಎಲ್ಲ ಸ್ನಾತಕೋತ್ತರ ವಿಭಾಗಳ ಮುಖ್ಯಸ್ಥರುಗಳಿಗೆ
- ಎಲ್ಲ ಪ್ರಾಚಾರ್ಯರು, ಕವಿವಿಯ ಅಧೀನ ಮಹಾವಿದ್ಯಾಲಯಗಳಿಗೆ
- ಮುಖ್ಯಸ್ಥರು ಕವಿವಿ ಸ್ನಾತಕೋತ್ತರ ಕೇಂದ್ರ ಕಾರವಾರ ಹಾಗೂ ಗದಗ
- ಕವಿವಿ ಎಲ್ಲ ಕಚೇರಿಗಳ ಮುಖ್ಯಸ್ಥರಿಗೆ
- ಗಣಕಯಂತ್ರ ಕೇಂದ್ರ ಅಧಿಕಾರಿಗಳು, ಕವಿವಿ ಧಾರವಾಡ
- ಕ್ಷೇಮಪಾಲಕರು,ಎಲ್ಲ ವಸತಿ ನಿಲಯಗಳು, ಕವಿವಿ ಧಾರವಾಡ
- ಪ್ರಾಚಾರ್ಯರು, ಕವಿವಿ ಪ್ರಾಥಮಿಕ/ಮಾಧ್ಯಮಿಕ ಶಾಲೆಗಳಿಗೆ
- ಗ್ರಂಥಪಾಲಕರು, ಬಸವನಾಳ ಗ್ರಂಥಾಲಯ, ಕವಿವಿ ಧಾರವಾಡ
- ನಿರ್ದೇಶಕರು, ಪ್ರಸಾರಾಂಗ, ಮುದ್ರಣಾಲಯ, ದೈಹಿಕ ಶಿಕ್ಷಣ, ಕನ್ನಡ ಅಧ್ಯಯನ ಸಂಸ್ಥೆ ಎನ್.ಎಸ್.ಎಸ್. ಘಟಕ, ಪಿ.ಎಂ.ಇ. ಬಿ. ವಿಭಾಗ, ಹಾಗೂ ಎನ್.ಎ.ಇ.ಪಿ. ಕವಿವಿ ಧಾರವಾಡ
- ವಿಶೇಷ ಅಧಿಕಾರಿಗಳು, ಎಸ್‌ಸಿ ಎಸ್‌ಟಿ ಘಟಕ,ಪ್ರ-ವರ್ಗ-1 ಮತ್ತು ಅಲ್ಪಸಂಖ್ಯಾತರ ಮತ್ತು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಘಟಕ ಕವಿವಿ ಧಾರವಾಡ
- ಉದ್ಯಾನಾಧಿಕಾರಿಗಳು, ಕೇಂದ್ರ ಕಾರ್ಯಾಗಾರ ಅಧಿಕಾರಿಗಳು, ಕವಿವಿ ಧಾರವಾಡ
- ಉಪಕುಲಸಚಿವರು, ಡಿಪಿಎಆರ್, ಬಾಹ್ಯ ಪರೀಕ್ಷಾ ವಿಭಾಗ, ಕವಿವಿ ಧಾರವಾಡ
- ಉಪಕುಲಸಚಿವರು ವಿದ್ಯಾಮಂಡಳ ವಿಭಾಗ ಕವಿವಿ ಧಾರವಾಡ
- ಉಪಕುಲಸಚಿವರು / ಸಹಾಯಕ ಕುಲಸಚಿವರು (ಹಣಕಾಸು ವಿಭಾಗ).
- ಉಪಕುಲಸಚಿವರು / ಸಹಾಯಕ ಕುಲಸಚಿವರು (ಪರಿಕ್ಷಾ ವಿಭಾಗ).
- ಅಧೀಕ್ಷಕರು, ಹಣಕಾಸು ವಿಭಾಗದ ಎಲ್ಲ ಘಟಕಗಳು ಕ.ವಿ.ವಿ ಧಾರವಾಡ.